**MVC** – 436/2025 **ಪಿ ಡಬ್ಲ್ಯೂ:1**

**ದಿ:09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರ ಪರ ವಕೀಲರಾದ ಶ್ರೀ ಪಿ ಎಂ ಸಿ ರವರಿಂದ.**

ಮೆಹಬೂಬಸಾಬ ಕಲಘಟಗಿ ಇವರು ನನ್ನ ಯಜಮಾನರು. ಸದರಿಯವರು ಮೇಣಸಿನಕಾಯಿ ವ್ಯಾಪಾರ ಮಾಡುತ್ತಿದ್ದರು. ನಮಗೆ ಒಟ್ಟು ಐದು ಜನ ಮಕ್ಕಳು. ಐದು ಮಂದಿಯಲ್ಲಿ ಮೂವರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಮೂವರಿಗು ಮದುವೆಯಾಗಿ ಗಂಡನ ಮನೆಯಲ್ಲಿ ಇರುತ್ತಾರೆ. ಇಬ್ಬರು ಗಂಡು ಮಕ್ಕಳು ಮದುವೆಯಾಗಿ ಬೇರೆ ಬೇರೆ ಇರುತ್ತಾರೆ. ಸದರಿ ಅಪಘಾತ ಯಾವ ಯಾವ ಗಾಡಿಯ ನಡುವೆ ಆಗಿದೆ ಎಂದರೆ ಸಾಕ್ಷಿ ಕಾರ ಬಂದು ಅವರಿಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ ಎನ್ನುತ್ತಾರೆ. ನನ್ನ ಯಜಮಾನರು ಮೋಟಾರ ಸೈಕಲ್ ನ ಮೇಲೆ ಹೋಗುತ್ತಿದ್ದರು. ಆ ದಿನ ನನ್ನ ಯಜಮಾನರೆ ಗಾಡಿ ಚಾಲನೆ ಮಾಡುತ್ತಿದ್ದರು. ಸದರಿಯವರು ಹಳೇ ಹುಬ್ಬಳ್ಳಿಯಿಂದ ಅವರು, ಸಾಕ್ಷಿ ಮುಂದುವರೆದು ಕುಂದಗೊಳಕ್ಕೆ ಯಾವುದೋ ಕಾರಣಕ್ಕೆ ಹೋಗಿದ್ದರು ಎನ್ನುತ್ತಾರೆ. ಕುಂದಗೋಳದಿಂದ ಬರುವ ಮುಂದೆ ಅಪಘಾತವಾಗಿದೆ. ಅಪಘಾತ ಎಲ್ಲಿ ಆಗಿದೆ ಎಂದರೆ ಸಾಕ್ಷಿ ಧಾರವಾಡದ ದಾರಿಯಲ್ಲಿ ಆಗಿದೆ ಎನ್ನುತ್ತಾರೆ. ಸದರಿ ಅಪಘಾತದ ಬಗ್ಗೆ ದೂರನ್ನು ಯಾರು ಕೊಟ್ಟಿದ್ದಾರೆಂದರೆ ಸಾಕ್ಷಿ ಅಲ್ಲಿ ಇದ್ದವರು ಕೊಟ್ಟಿದ್ದಾರೆ ಎನ್ನುತ್ತಾರೆ. ಅವರ ಹೆಸರು ಏನೆಂಬುವುದು ನನಗೆ ಗೊತ್ತಿಲ್ಲ. ನನ್ನ ಯಜಮಾನರಿಗೆ ಚಾಲನೆ ಪರವಾನಿಗೆ ಇತ್ತಾ ಎಂದರೆ ಸಾಕ್ಷಿ ಇತ್ತೋವೂೕ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ದಿನ ಗಾಡಿ ತೆಗೆದುಕೊಂಡಿದ್ದರು ಎಂದು ಹೇಳಿದ್ದು ಅದರ ಮಾಲೀಕರು ಯಾರು ಎಂದರೆ ಸಾಕ್ಷಿ ಸೈಯದ್ ಮೆಹಬೂಬಸಾಬ ಕಲಘಟಗಿ ಅಂದರೆ ನನ್ನ ಮಗ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ಗಾಡಿಯ ಮಾಲೀಕರನ್ನು ಪಕ್ಷಗಾರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಪ್ರಕರದಲ್ಲಿ ಸೈಯದ್ ಮೆಹಬೂಬಸಾಬ ಕಲಘಟಗಿ ಇವರನ್ನು ಪಕ್ಷಗಾರನ್ನಾಗಿ ಮಾಡಿಲ್ಲದ ಕಾರಣ ಈ ಪ್ರಕರಣವನ್ನು ನಡೆಸಲು ಯೋಗ್ಯವಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಯಜಮಾನರಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಪೋಲೀಸರು ಈ ಸಂಬಂಧ ಆತನ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆಂದರೆ ಸಾಕ್ಷಿ ಬೇರೆ ಎನ್ನನ್ನು ಹೇಳುತ್ತಾರೆ. ಈ ಸಂಬಂಧ ನನ್ನ ಯಜಮಾನರನ್ನು ಕೂಡಾ ಆರೋಪಿಯನ್ನಾಗಿ ಮಾಡಿರುತ್ತಾರೆಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಸದರಿಯವರಿಗೆ ಚಾಲನಾ ಪರವಾನಿಗೆ ಇಲ್ಲದ ಕಾರಣ 2 ನೇ ಎದರುದಾರರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಆ ಕಾರಣಕ್ಕೆ ಅವಶ್ಯಕತೆ ಪಕ್ಷಗಾರರನ್ನು ಸೇರಿಸದೆ ಇರುವ ಕಾರಣ ಪ್ರಕರಣವನ್ನು ನಡೆಸಲು

ಬರುವುದಿಲ್ಲವೆಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಸದರಿ ಅಪಘಾತ ನನ್ನ ಯಜಮಾನರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ